ADFACTORS PR
Knowledge-driven communications

| | | | |
|---|---|---|---|
| Published Date: | 8 Aug 2018 | Publication: | Hosadigantha Daily (Kannada) |
| Edition: | Bangalore | Page No: | 1 |
| MAV/CCM: | 49437.5/39.55 | Circulation: | 42000 |

ಐಟಿವಿಜ್ ರಸಪ್ರಶ್ನೆ ಸ್ಪರ್ಧೆ

# ಸೇಂಟ್ ಪಾಲ್ ಶಾಲೆ ವಿದ್ಯಾರ್ಥಿಗಳಿಗೆ ಜಯ

ದಿಗಂತ ಚಿತ್ರ



ಟಿಸಿಎಸ್ ಐಟಿವಿಜ್ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ಸುಚ್ಚಿತ್ ಹೆಗ್ಡೆ ಮತ್ತು ರಾಜಶಂಕರ್‌ಗೆ ಪ್ರಶಸ್ತಿ ನೀಡುತ್ತಿರುವುದು.

**ದಿಗಂತ ವರದಿ: ಬೆಂಗಳೂರು, ಆ. 7**

ಐಟಿ ಸೇವಾ ಸಂಸ್ಥೆ (ಟಿಸಿಎಸ್)ಆಯೋಜಿಸಿದ್ದ ಟಿಸಿಎಸ್ ಐಟಿವಿಜ್ ರಸಪ್ರಶ್ನೆ ಸ್ಪರ್ಧೆಯಲ್ಲಿ ಸೇಂಟ್ ಪಾಲ್ ಆಂಗ್ಲ ಮಾಧ್ಯಮ ಶಾಲೆಯ ಸುಚ್ಚಿತ್ ಹೆಗ್ಡೆ ಮತ್ತು ರಾಜಶಂಕರ್ ವಿಜೇತರಾಗಿದ್ದಾರೆ.

ಬೆಂಗಳೂರಿನ ವಯ್ಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಮಂಗಳವಾರ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಬೆಂಗಳೂರಿನ ವಿವಿಧ ಶಾಲೆಗಳಿಂದ 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಟಿಸಿಎಸ್ ಐಟಿ ಕ್ವಿಜ್ ಸ್ಪರ್ಧೆಯು ತಾಂತ್ರಿಕ ಕೌಶಲ , ಉತ್ತಮಪಡಿಸುವ ಗುರಿಯನ್ನು ಹೊಂದಿದ್ದು, ಸಭಿಕರು ಮತ್ತು ಸ್ಪರ್ಧಿಗಳಲ್ಲಿ ಕಡೆಯವರೆಗೂ ಕುತೂಹಲ ಮೂಡಿಸಿತ್ತು. ಮಾಸ್ ಪರ್ಸನಲಿಸೇಷನ್, ಲೆವೆರೇಜಿಕ್ ಎಕೊಸಿಸ್ಟಮ್, ಕ್ರಿಯೇಟಿಂಗ್ ಎಕ್ಸೊಫೋನೆನ್ಷಿಯಲ್ ವ್ಯಾಲ್ಯೂ ಮತ್ತು ಎಂಬ್ರೇಸಿಂಗ್ ರಿಸ್ಕ್ ವಲಯದ ಒಟ್ಟು ಐದು ಸುತ್ತುಗಳಲ್ಲಿ ಸ್ಪರ್ಧೆ ನಡೆಯಿತು.

ಐದು ಸುತ್ತಿನ ಸ್ಪರ್ಧೆಗಳ ನಂತರ ಸೇಂಟ್ ಪಾಲ್ ಇಂಗ್ಲಿಷ್ ಶಾಲೆಯಿಂದ ಸುಚ್ಚಿತ್ ಹೆಗ್ಡೆ ಮತ್ತು ರಾಜಶಂಕರ್ ಅವರು ಪ್ರಶಸ್ತಿ ಗೆದ್ದುಕೊಂಡರು. ವಿಜೇತ ತಂಡಕ್ಕೆ 60ಸಾವಿರ ರೂ. ಮೌಲ್ಯದ ಗಿಫ್ಟ್ ವೋಚರ್ ಮತ್ತು ಪಿಎಸ್‌ಬಿಬಿ-ಎಲ್‌ಎಲ್‌ಎ ಶಾಲೆ ಪ್ರತಿನಿಧಿಸಿದ ಆರ್ಯನ್ ಪಾಟೇಲ್ ಮತ್ತು ಪ್ರಣವ್ ಪ್ರಭು ರನ್ನರ್‌ಅಪ್‌ಗಳಿಗೆ 40 ಸಾವಿರ ಮೌಲ್ಯದ ಗಿಫ್ಟ್ ವೋಚರ್ ನೀಡಲಾಯಿತು. ಜೊತೆಗೆ ವಿಶೇಷ ವಿನ್ಯಾಸದ ಟ್ರೋಫಿ ಮತ್ತು ಮೆಡಲ್ ನೀಡಲಾಯಿತು. ಅಂತಿಮ ಸುತ್ತು ಪ್ರವೇಶಿಸಿದ ಟಿಸಿಎಸ್‌ನ ಆರು ಮಂದಿಗೆ ಜಿಮ್ ಬ್ಯಾಗ್, ಬಹುಕಾರ್ಯದ ಮ್ಯೂಸಿಕ್ ಟಾರ್ಚ್, ಬ್ಲೂಟೂತ್ ಸ್ಪೀಕರ್, ವೈರ್‌ಲೆಸ್ ಔಟ್‌ಡೋರ್ ಸ್ಪೀಕರ್ ಮತ್ತು ಟಿಸಿಎಸ್50 ಪೆನ್ ಡ್ರೈವ್ ಮತ್ತು ಪ್ರೀಮಿಯಂ ಫೈವ್ ಸ್ಟಾರ್ ಹೋಟೆಲ್‌ನ ಡೈನಿಂಗ್ ಕೂಪನ್ ನೀಡಲಾಯಿತು.

1/1